**ಓ.ಎಸ್. ನಂ. 149/2016**

**ಡಿ.ಡಬ್ಲ್ಯು: 01 (Junji Kotresh)**

**ದಿನಾಂಕಃ 18.11.2025 ರಂದು** ಮುಖ್ಯ ವಿಚಾರಣೆಗೆ **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರ ಶ್ರೀ.**D.G.B.** ವಕೀಲರಿಂದಃ

ಸಾಕ್ಷ್ಯ ರೂಪದಲ್ಲಿ ಹಾಜರು ಪಡಿಸಿರುವ ನನ್ನ ಪ್ರಮಾಣ ಪತ್ರದಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ತಿಳಿದುಕೊಂಡು ನಾನು ನನ್ನ ಸಹಿ ಮಾಡಿದ್ದೇನೆ.

**ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳ ವಿವರ ಈ ಕೆಳಗಿನಂತಿವೆ:**

1. ಖಂಡಿತ ಕ್ರಯಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಡಿ 01 ಎಂದು ಗುರುತಿಸಲಾಯಿತು.
2. 2 ಕಂದಾಯ ಇಲಾಖೆಯವರ ಸರ್ಕಾರಿ ಬಾಕಿ ಪಾವತಿಯ ರಸೀತಿ ಯನ್ನು ಹಾಜರು ಪಡಿಸಿದ್ದು ಅದನ್ನು ನಿಡಿ 02 ಎಂದು ಗುರುತಿಸಲಾಯಿತು.
3. ನಮೂನೆ-12 ಮ್ಯುಟೇಶನ್ ರಿಜಿಸ್ಟರ್ ಪ್ರತಿ ನಿಯಮ 46 ಅನ್ನು ಹಾಜರು ಪಡಿಸಿದ್ದು ಅದನ್ನು ನಿಡಿ 03 ಎಂದು ಗುರುತಿಸಲಾಯಿತು.
4. ಸರ್ವೆ ನಂ. 34 ಎ ವಿಸ್ತೀರ್ಣ 2.23 ರ 5 ದೃಢೀಕೃತ ಪಹಣಿ ಪತ್ರಿಕೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಡಿ 04 ಎಂದು ಗುರುತಿಸಲಾಯಿತು.
5. ಸರ್ವೆ ನಂ. 34 ಎ ವಿಸ್ತೀರ್ಣ 2.28 ರ 16 ದೃಢೀಕೃತ ಪಹಣಿ ಪತ್ರಿಕೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಡಿ 05 ಎಂದು ಗುರುತಿಸಲಾಯಿತು.
6. ಹಿರಿಯ ಉಪ ನೊಂದಣಾಧಿಕಾರಿ, ಕೂಡ್ಲಿಗಿ ರವರ ಪ್ರಪತ್ರ ಸಂಖ್ಯೆ-15 ನ್ನು ಹಾಜರು ಪಡಿಸಿದ್ದು ಅದನ್ನು ನಿಡಿ 06 ಎಂದು ಗುರುತಿಸಲಾಯಿತು.

**ಮುಖ್ಯ ವಿಚಾರಣೆಃ ಮುಕ್ತಾಯ.**

**ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು.**

**(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)**

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.